# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಗುರುವಾರ, ೨೧, ಮೇ, ೨೦೨೬ (ವೈಶಾಖ, ೩೧, ಶಕವರ್ಷ, ೧೯೪೮)<br>BENGALURU, THURSDAY, 21, MAY, 2026 ( VAISHAKHA , 31, SHAKAVARSHA, 1948) | ನಂ. ೩೮೬<br>No. 386 |
|---|---|---|


**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 10 ಸೇಅನೇ 2026

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಡಾ|| ಬಿ. ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 21.05.2026

**<u>ಸುತ್ತೋಲೆ</u>**

ವಿಷಯ: ಅನುಕಂಪದ ಆಧಾರದ ನೇಮಕಾತಿಗೆ ಸಂಬಂಧಿಸಿದಂತೆ ವಿವಿಧ ಪ್ರಾದೇಶಿಕ ಆಯುಕ್ತರ ಕಾರ್ಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕ್ರಮವಹಿಸುವ ಬಗ್ಗೆ.

ಉಲ್ಲೇಖ:
1. ದಿನಾಂಕ 12.09.1996 ರ ಅಧಿಸೂಚನೆ ಸಂಖ್ಯೆ ಸಿಆಸುಇ 100 ಸೇಅನೇ 1995.
2. ದಿನಾಂಕ 07.02.1997 ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 36 ಸೇಅನೇ 1996.
3. ದಿನಾಂಕ 24.11.2006 ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 48 ಸೇಅನೇ 2006.
4. ದಿನಾಂಕ:13.02.2026 ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 10 ಸೇಅನೇ 2026.

*****

ರಾಜ್ಯ ಸರ್ಕಾರಿ ನೌಕರರು ಸೇವೆಯಲ್ಲಿರುವಾಗಲೇ ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ ಉಂಟಾಗುವ ತಕ್ಷಣದ ಆರ್ಥಿಕ ಸಂಕಷ್ಟವನ್ನು ನಿವಾರಿಸುವ ನಿಟ್ಟಿನಲ್ಲಿ (To tide over the immediate financial crisis) ಅವರ ಕುಟುಂಬದ ಓರ್ವ ಅರ್ಹ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿಯನ್ನು ನೀಡುವ ಕುರಿತು, ಮಾನ್ಯ ಸರ್ವೋಚ್ಚ ನ್ಯಾಯಾಲಯವು Sri. Umesh Kumar Nagpal Vs. State of Haryana ಪ್ರಕರಣದಲ್ಲಿ ನೀಡಿರುವ ತೀರ್ಪಿನ ಮೇರೆಗೆ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 ರ ನಿಯಮಗಳನ್ನು ದಿನಾಂಕ:13.09.1996 ರಿಂದ ಜಾರಿಗೆ ತರಲಾಗಿರುತ್ತದೆ.

ಈ ನಿಯಮಗಳ ನಿಯಮ 4(5) ರನ್ವಯ ಮೃತ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿಯನ್ನು ನೇರ ನೇಮಕಾತಿ ರಿಕ್ತಸ್ಥಾನಗಳಿಗೆದುರಾಗಿ ಮತ್ತು ನಿಯಮ 4(6) ರನ್ವಯ ಮೃತ ಸರ್ಕಾರಿ ನೌಕರನು ಸೇವೆ ಸಲ್ಲಿಸುತ್ತಿದ್ದ ಇಲಾಖೆಯಲ್ಲಿಯೇ ನೇಮಕಾತಿ ನೀಡಬೇಕಾಗುತ್ತದೆ. ಒಂದು ವೇಳೆ, ನೌಕರರು ಸೇವೆ ಸಲ್ಲಿಸುತ್ತಿದ್ದ ಇಲಾಖೆಯಲ್ಲಿ ರಿಕ್ತ

ಸ್ಥಾನಗಳು ಲಭ್ಯವಿಲ್ಲದೇ ಇದ್ದಲ್ಲಿ, ಅಂತಹ ಸಂದರ್ಭಗಳಲ್ಲಿ ಮಾತ್ರ, ರಿಕ್ತ ಸ್ಥಾನಗಳು ಲಭ್ಯವಿರುವ ಬೇರಾವುದೇ ಇಲಾಖೆಯಲ್ಲಿ ನೇಮಕಾತಿ ನೀಡಬಹುದಾಗಿರುತ್ತದೆ.

ಇಂತಹ ಸಂದರ್ಭಗಳಲ್ಲಿ ಅನುಸರಿಸಬೇಕಾದ ವಿಧಿವಿಧಾನಗಳ ಬಗ್ಗೆ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 36 ಸೇಅನೇ 96, ದಿನಾಂಕ 07.02.1997 ರನ್ವಯ ಸ್ಪಷ್ಟ ಮಾರ್ಗಸೂಚನೆಗಳನ್ನು ನೀಡಲಾಗಿದೆ. ಸದರಿ ಅಧಿಕೃತ ಜ್ಞಾಪನದಲ್ಲಿ, ಸರ್ಕಾರಿ ನೌಕರನ ಮಾತೃ ಇಲಾಖೆಯಲ್ಲಿ ಅನುಕಂಪದ ಆಧಾರದ ನೇಮಕಾತಿಗೆ ಬಾಕಿಯಿರುವ ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲು ರಿಕ್ತಸ್ಥಾನಗಳು ಲಭ್ಯವಿಲ್ಲದಿದ್ದಲ್ಲಿ, ಅಂತಹ ಅರ್ಜಿಗಳನ್ನು ಅದರೊಂದಿಗಿರುವ ದಾಖಲೆಗಳು, ಪ್ರಮಾಣ ಪತ್ರಗಳು ಇತ್ಯಾದಿಗಳೊಂದಿಗೆ ಅಭ್ಯರ್ಥಿಯು ವಾಸಿಸುತ್ತಿರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಂಬಂಧಿಸಿದ ವಿಭಾಗಾಧಿಕಾರಿಯವರಿಗೆ ಇಲಾಖಾ ಮುಖ್ಯಸ್ಥರು ಕಳುಹಿಸಿಕೊಡಬೇಕೆಂದು ಸೂಚಿಸಲಾಗಿತ್ತು.

ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 48 ಸೇಅನೇ 2006 ದಿನಾಂಕ 24.11.2006 ರಲ್ಲಿ, ಮೃತ ಸರ್ಕಾರಿ ನೌಕರನು ಸೇವೆ ಸಲ್ಲಿಸುತ್ತಿದ್ದ ಇಲಾಖೆಯಲ್ಲಿ ಸಂಬಂಧಿಸಿದ ಹುದ್ದೆಯ ರಿಕ್ತ ಸ್ಥಾನಗಳು ಲಭ್ಯವಿಲ್ಲದೇ ಇದ್ದಲ್ಲಿ, ರಿಕ್ತ ಸ್ಥಾನಗಳು ಲಭ್ಯವಿರುವ ಇತರೆ ಇಲಾಖೆಗಳಿಗೆ ಅಭ್ಯರ್ಥಿಗಳನ್ನು ಅನುಕಂಪದ ಆಧಾರದ ನೇಮಕಾತಿಗಾಗಿ ಹಂಚಿಕೆ ಮಾಡಲು ಸಮನ್ವಯಾಧಿಕಾರಿ ಪ್ರಕಾರ್ಯಗಳನ್ನು ಆಯಾ ಪ್ರಾದೇಶಿಕ ಆಯುಕ್ತರಿಗೆ ಪ್ರತ್ಯಾಯೋಜಿಸಲಾಗಿದೆ.

ಅನುಕಂಪದ ಆಧಾರದ ನೇಮಕಾತಿ ಪ್ರಕರಣಗಳಲ್ಲಿ ಮಾತೃ ಇಲಾಖೆಯಲ್ಲಿ ಖಾಲಿ ಹುದ್ದೆಗಳು ಲಭ್ಯವಿಲ್ಲದಿದ್ದಲ್ಲಿ, ಸಂಬಂಧಪಟ್ಟ ಪ್ರಾದೇಶಿಕ ಆಯುಕ್ತರು ಅನುಕಂಪದ ಆಧಾರದ ನೇಮಕಾತಿಗಾಗಿ ಇಲಾಖೆಗಳನ್ನು ಹಂಚಿಕೆ ಮಾಡುವಾಗ ನ್ಯಾಯಯುತವಾಗಿ ಪಾರದರ್ಶಕತೆಯನ್ನು ಕಾಪಾಡುವ ದೃಷ್ಠಿಯಿಂದ ಹಾಗೂ ಕೆಲವೊಂದು ಆಯ್ದ ಇಲಾಖೆಗಳಿಗೆ ನೇಮಕಾತಿ ಪಡೆಯಲು ಅಭ್ಯರ್ಥಿಗಳು ಪ್ರಭಾವ ಬೀರುವುದನ್ನು ತಪ್ಪಿಸುವ ದೃಷ್ಠಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಕೆಳಕಂಡ ಕ್ರಮಗಳನ್ನು ಪಾಲಿಸುವಂತೆ ದಿನಾಂಕ:13.02.2026 ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 10 ಸೇಅನೇ 2026 ರಲ್ಲಿ ತಿಳಿಸಿದೆ.

(i) ಪ್ರಾದೇಶಿಕ ಆಯುಕ್ತರ ವ್ಯಾಪ್ತಿಯಲ್ಲಿನ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳ, ವೃಂದವಾರು ಹಾಗೂ ಜಿಲ್ಲಾವಾರು ಮಾಹಿತಿ / ವಿವರಗಳನ್ನು ಪ್ರತಿ ತಿಂಗಳು HRMS-1 ರಲ್ಲಿ HRMS ವಿಭಾಗವು ಒದಗಿಸುವುದು.

(ii) ಕ್ರಮ ಸಂ. (i) ರಂತೆ HRMS-I ರಲ್ಲಿ ಜರುಗಿಸುವ ಮಾಹಿತಿಯನ್ನು ಆಧರಿಸಿ ಪ್ರಾದೇಶಿಕ ಆಯುಕ್ತರು ಅನುಕಂಪದ ಆಧಾರದ ನೇಮಕಾತಿಗೆ ಅಭ್ಯರ್ಥಿಯು ಅರ್ಹರಿರುವ ಹುದ್ದೆಯು ಯಾವ ಇಲಾಖೆಯಲ್ಲಿ ಅತೀ ಹೆಚ್ಚು ಖಾಲಿ ಇರುವುದೋ ಆ ಇಲಾಖೆಗೆ ಹಂಚಿಕೆ ಮಾಡುವುದು. ಯಾವುದೇ ಕಾರಣಕ್ಕೂ ಪ್ರಾದೇಶಿಕ ಆಯುಕ್ತರು ಇಲಾಖಾವಾರು ಖಾಲಿ ಹುದ್ದೆಗಳ ಮಾಹಿತಿಯನ್ನು ಇಲಾಖೆಗಳಿಂದ ಕೋರುವಂತಿಲ್ಲ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ದಿನಾಂಕ:13.02.2026 ರ ಅಧಿಕೃತ ಜ್ಞಾಪನದಂತೆ ಎಲ್ಲಾ ಪ್ರಾದೇಶಿಕ ಆಯುಕ್ತರು ಕ್ರಮವಹಿಸಲು ಅನುವಾಗುವಂತೆ, ಇಲಾಖೆಗಳ ನೇರ ನೇಮಕಾತಿ (Direct Recruitment), ಬಡ್ತಿ ಮೂಲಕ ನೇಮಕಾತಿ (Promotion Recruitment) ಯ ವಿವರಗಳನ್ನು ಹಾಗೂ ಇತ್ತೀಚಿನ ವೃಂದ ಮತ್ತು ನೇಮಕಾತಿ ನಿಯಮಗಳನ್ನು HRMS-2 Organogram ನಲ್ಲಿ update ಮಾಡುವಂತೆ ಹಾಗೂ ಈ ಮಾಡ್ಯೂಲ್‌ನಲ್ಲಿ ಡೇಟಾವನ್ನು ದೃಢೀಕರಿಸುವಂತೆ ಎಲ್ಲಾ ಇಲಾಖೆಗಳಿಗೆ / ಸಕ್ಷಮ ಪ್ರಾಧಿಕಾರಗಳಿಗೆ ಈ ಮೂಲಕ ಸೂಚಿಸಿದೆ.

(ಪ್ರತಿಭಾ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-3).

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH